# ಅನ್ನ ಭಾಗ್ಯ



## ಅನ್ನಭಾಗ್ಯ

### ಹಸಿವು ಮುಕ್ತ ಕರ್ನಾಟಕ

ಕಡು ಬಡವರ ಬಗ್ಗೆ ಈ ಸರ್ಕಾರ ಹೊಂದಿರುವ ಕಳಕಳಿಯಿಂದಾಗಿ ಒಂದು ರೂ.ಗೆ ಒಂದು ಕೆ.ಜಿ ಆಹಾರಧಾನ್ಯ ನೀಡುವ 'ಅನ್ನ ಭಾಗ್ಯ' ಯೋಜನೆ 2013ರ ಜುಲೈ ತಿಂಗಳಿನಿಂದ ರಾಜ್ಯದಾದ್ಯಂತ ಜಾರಿಯಾಗಿದೆ. ಅಕ್ಕಿ ಜೊತೆಗೆ, ರಾಗಿ, ಜೋಳ, ಕುಸುಬಲು ಅಕ್ಕಿ ಹಾಗೂ ಗೋಧಿಯನ್ನು ಸಹ ನೀಡಲಾಗುತ್ತಿದೆ. ಇದರಿಂದ ರಾಜ್ಯದ 1 ಕೋಟಿಗೂ ಅಧಿಕ ಕಡುಬಡ ಕುಟುಂಬಗಳಿಗೆ ಪ್ರಯೋಜನವಾಗುತ್ತಿದೆ.



**ಬ**ಡಜನರು ಯಾರ ಬಳಿಯೂ ಅನ್ನಕ್ಕಾಗಿ ಕೈಚಾಚದೆ ಸ್ವಾಭಿಮಾನದ ಬದುಕನ್ನು ಸಾಗಿಸಬೇಕೆನ್ನುವುದು ಸರ್ಕಾರದ ಆಶಯ. ಈ ಯೋಜನೆಯಿಂದ ಬಡ ಜನರ ಪೌಷ್ಟಿಕತೆ ಕೂಡ ಉತ್ತಮಗೊಳ್ಳಲಿದೆ. ಇದಲ್ಲದೆ, ಆಹಾರಧಾನ್ಯ ಖರೀದಿಯಲ್ಲಿ ಉಳಿತಾಯವಾಗುವ ಹಣ ಕಡುಬಡವರ ಇತರ ಅಗತ್ಯಗಳಿಗೆ ನೆರವಾಗುತ್ತಿದೆ. ಈ ಯೋಜನೆಗಾಗಿಯೇ ಸರ್ಕಾರ ಒಂದು ವರ್ಷದಲ್ಲಿ 4300 ಕೋಟಿ ರೂ.ಗಳನ್ನು ವೆಚ್ಚಮಾಡಿದೆ.

ಬಿಪಿಎಲ್ ಇಲ್ಲವೆ ಅಂತ್ಯೋದಯ ಅನ್ನ ಯೋಜನೆ (ಎಎವೈ) ಕಾರ್ಡ್ ಹೊಂದಿರುವ ವ್ಯಕ್ತಿಗಳ ಮನೆಯಲ್ಲಿ ಒಬ್ಬರೇ ಇದ್ದರೆ ತಿಂಗಳಿಗೆ 10 ಕೆ.ಜಿ ಆಹಾರ ಧಾನ್ಯ ಸಿಗುತ್ತದೆ. ಮನೆಯಲ್ಲಿ ಇಬ್ಬರು ಸದಸ್ಯರಿದ್ದರೆ 20 ಕೆ.ಜಿ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಜನರಿದ್ದರೆ 30 ಕೆ.ಜಿ ಆಹಾರ ಧಾನ್ಯವನ್ನು ಆ ಕುಟುಂಬಕ್ಕೆ ವಿತರಿಸಲಾಗುತ್ತಿದೆ.

**ಪಡಿತರ ಚೀಟಿ :** ಅನ್ನಭಾಗ್ಯ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಸರ್ಕಾರವು 'ಪಡಿತರ ಚೀಟಿ'

**ಯಾರಿಗೆ ಎಷ್ಟು ಆಹಾರ ಧಾನ್ಯ ವಿತರಣೆ**

| ಆಹಾರ ಧಾನ್ಯ | ಉತ್ತರ ಕರ್ನಾಟಕ | ದಕ್ಷಿಣ ಕರ್ನಾಟಕ |
|---|---|---|
| **10 ಕೆ.ಜಿ ಆಹಾರ ಧಾನ್ಯಕ್ಕೆ ಅರ್ಹರಾದವರಿಗೆ** | | |
| ಅಕ್ಕಿ | 4 ಕೆ.ಜಿ | 7 ಕೆ.ಜಿ |
| ಗೋಧಿ | 2 ಕೆ.ಜಿ | 1 ಕೆ.ಜಿ |
| ಜೋಳ | 4 ಕೆ.ಜಿ | 2 ಕೆ.ಜಿ ರಾಗಿ |
| **20 ಕೆ.ಜಿ ಆಹಾರ ಧಾನ್ಯಕ್ಕೆ ಅರ್ಹರಾದವರಿಗೆ** | | |
| ಅಕ್ಕಿ | 11 ಕೆ.ಜಿ | 15 ಕೆ.ಜಿ |
| ಗೋಧಿ | 3 ಕೆ.ಜಿ | 2 ಕೆ.ಜಿ |
| ಜೋಳ | 6 ಕೆ.ಜಿ | 3 ಕೆ.ಜಿ ರಾಗಿ |
| **30 ಕೆ.ಜಿ ಆಹಾರ ಧಾನ್ಯಕ್ಕೆ ಅರ್ಹರಾದವರಿಗೆ** | | |
| ಅಕ್ಕಿ | 17 ಕೆ.ಜಿ | 22 ಕೆ.ಜಿ |
| ಗೋಧಿ | 5 ಕೆ.ಜಿ | 3 ಕೆ.ಜಿ |
| ಜೋಳ | 8 ಕೆ.ಜಿ | 5 ಕೆ.ಜಿ ರಾಗಿ |

ಯೋಜನೆಯನ್ನು ಜಾರಿಗೊಳಿಸಿದೆ. ಇದರಿಂದಾಗಿ ಭಾನುವಾರವೂ ಸೇರಿದಂತೆ ಪ್ರತಿ ತಿಂಗಳು 1 ರಿಂದ 10 ನೇ ತಾರೀಖಿನವರೆಗೆ ಬೆಳಗ್ಗೆ 8 ರಿಂದ 12 ಹಾಗೂ ಸಂಜೆ 4 ರಿಂದ 8 ಗಂಟೆವರೆಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆದಿರುವುದು ಈಗ ಕಡ್ಡಾಯವಾಗಿದೆ.

**ಜಾಗೃತ ಸಮಿತಿ ರಚನೆ:** ಅನ್ನಭಾಗ್ಯ ಯೋಜನೆಯ ಮೇಲ್ವಿಚಾರಣೆಗೆ ಪ್ರತಿ ನ್ಯಾಯಬೆಲೆ ಅಂಗಡಿ, ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ನಗರ ಸಭೆ ಇಲ್ಲವೆ ಪುರಸಭೆ ಹಾಗೂ ಜಿಲ್ಲಾ ಮಟ್ಟದಲ್ಲಿ ಹೀಗೆ ಪ್ರತಿ ಹಂತದಲ್ಲೂ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಯು ಆಹಾರ ಧಾನ್ಯಗಳ ವಿತರಣೆಯ ಮೇಲ್ವಿಚಾರಣೆ ನಡೆಸಲಿದೆ. ಹಾಗೆಯೇ, ಆಹಾರ ಧಾನ್ಯಗಳ ದುರ್ಬಳಕೆ ಮಾಡಿಕೊಳ್ಳುವ ಕುಟುಂಬ ಇಲ್ಲವೆ ಬಡವರಿಂದ ಆಹಾರ ಧಾನ್ಯಗಳನ್ನು ಮರು ಖರೀದಿಸುವ ವ್ಯಾಪಾರಸ್ಥರ ಮೇಲೂ ಜಾಗೃತ ಸಮಿತಿ ಕಣ್ಣಿಡಲಿದೆ.

**ಸಹಾಯವಾಣಿ:** ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ನಿಯಂತ್ರಣ ಕೊಠಡಿಯಲ್ಲಿ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. ಟೋಲ್ ಫ್ರೀ ದೂರವಾಣಿ ಸಂಖ್ಯೆಗೆ ಯಾವುದೇ ಹಣವನ್ನು ನೀಡದೆ, ಗ್ರಾಹಕರು ಉಚಿತವಾಗಿ 18004259339ಗೆ ಕರೆ ಮಾಡಿ ತಮ್ಮ ದೂರುಗಳನ್ನು ದಾಖಲಿಸಬಹುದು. ಈ ನಿಯಂತ್ರಣ ಕೊಠಡಿಗೆ ಬರುವ ದೂರುಗಳಿಗೆ ಇದೇ ಸಹಾಯವಾಣಿಯು ಗ್ರಾಹಕ ಮಾರ್ಗದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತದೆ. ಈ ಸಹಾಯವಾಣಿ ಸಂಖ್ಯೆ ಎಲ್ಲಾ ಪಡಿತರ ಚೀಟಿಗಳಲ್ಲೂ ಮುದ್ರಿತವಾಗಿರುತ್ತದೆ.

**ಆಹಾರವಾಣಿ :** 'ಅನ್ನಭಾಗ್ಯ' ಯೋಜನೆಗೆ ಸಂಬಂಧಿಸಿದಂತೆ ಉಂಟಾಗುವ ಗೊಂದಲಗಳು ಹಾಗೂ ಪಡಿತರ ಚೀಟಿಯ ವಿತರಣೆ ವ್ಯವಸ್ಥೆಯಲ್ಲಿನ ತೊಂದರೆಗಳು ಹಾಗೂ ಇನ್ನಿತರ ದೂರುಗಳನ್ನು ದಾಖಲಿಸಲು ಟೋಲ್‌ಫ್ರೀ 1967 'ಆಹಾರವಾಣಿ' ಎನ್ನುವ ಉಚಿತ ಸಹಾಯವಾಣಿಯನ್ನು ಸರ್ಕಾರವು ಆರಂಭಿಸಿದೆ. ಈ 1967 ಸಂಖ್ಯೆಗೆ ಉಚಿತ ಕರೆ ಮಾಡಿ ತಮ್ಮ ದೂರು ದುಮ್ಮಾನಗಳನ್ನು ದಾಖಲಿಸಬಹುದು.

ಶ್ರೀ ದಿನೇಶ್ ಗುಂಡೂರಾವ್
ಆಹಾರ ಮತ್ತು ನಾಗರಿಕ ಪೂರೈಕೆ
ಹಾಗೂ ಗ್ರಾಹಕ ವ್ಯವಹಾರಗಳ
ರಾಜ್ಯ ಸಚಿವರು



1. ರಾಜ್ಯದಲ್ಲಿ 'ಅನ್ನಭಾಗ್ಯ' ಯೋಜನೆ ಜುಲೈ 2013 ರಿಂದ ಜಾರಿ.
2. ರಾಜ್ಯ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯನ್ನು ಅಳವಡಿಸಿಕೊಂಡಿದ್ದು ಜನವರಿ 2014 ರಿಂದ ಕಾಯಿದೆಯು ಜಾರಿಯಲ್ಲಿದೆ.
3. ಪ್ರತಿ ತಿಂಗಳು 2.93 ಲಕ್ಷ ಮೆ.ಟನ್ ಆಹಾರಧಾನ್ಯ 1 ಕೋಟಿ 3 ಲಕ್ಷ ಪಡಿತರ ಚೀಟಿದಾರರಿಗೆ ವಿತರಣೆ.
4. ರಾಜ್ಯ ಸರ್ಕಾರದಿಂದ 2013–14ನೇ ಸಾಲಿನಲ್ಲಿ 3050 ಕೋಟಿ ರೂ.ಗಳು ಹಾಗೂ 2014–15ನೇ ಸಾಲಿನಲ್ಲಿ 'ಅನ್ನಭಾಗ್ಯ' ಯೋಜನೆಗಾಗಿ 4365 ಕೋಟಿ ರೂ.ಗಳ ಸಹಾಯಧನ.'
5. ಪಡಿತರ ಖಾತ್ರಿ' ಯೋಜನೆಯನ್ನು ಫೆಬ್ರವರಿ 2014 ರಿಂದ ಜಾರಿಗೊಳಿಸಲಾಗಿದ್ದು, ಈ ಯೋಜನೆಯಂತೆ ಪ್ರತಿ ತಿಂಗಳ ಮೊದಲ ಹತ್ತು ದಿನಗಳು ಎಲ್ಲಾ ನ್ಯಾಯಬೆಲೆ ಅಂಗಡಿಗಳು ಬೆಳಿಗ್ಗೆ 8.00 ಘಂಟೆಯಿಂದ ರಾತ್ರಿ 8.00 ಘಂಟೆಯವರೆಗೆ ಕಡ್ಡಾಯವಾಗಿ ತೆರೆದಿರುತ್ತವೆ. ಸೀಮೆ ಎಣ್ಣೆಯನ್ನು ಹೊರತುಪಡಿಸಿ, ಅಕ್ಕಿ, ಗೋಧಿ ಮತ್ತು ಸಕ್ಕರೆ. ಎಲ್ಲಾ ಪಡಿತರ ಪದಾರ್ಥಗಳು ಈ ಅವಧಿಯಲ್ಲಿ ವಿತರಣೆ.